

## ಬೃಹತ್ ಬಾಳೆಮೋತೆ

ಸಾಧಾರಣವಾಗಿ ಏಳೆಂಟು ತಿಂಗಳಲ್ಲಿ ಬೆಳೆದು ವರ್ಷಕ್ಕೆ ಮೊದಲೇ ಗೊನೆ ಬಿಟ್ಟು ಹಣ್ಣು ಕೊಡುವ ಬಾಳೆಗಿಡಗಳ ಬಗ್ಗೆ ನಮಗೆಲ್ಲರಿಗೂ ಗೊತ್ತು. ನಮ್ಮ ನಮ್ಮ ಪ್ರದೇಶಗಳಲ್ಲಿ ಬೆಳೆಯುವ ಸ್ಥಳೀಯ ತಳಿಗಳ ಬಗೆಗೂ ಎಲ್ಲರಿಗೂ ಮಾಹಿತಿಯಿರುತ್ತದೆ. ಇಲ್ಲಿ ಕಾಣುತ್ತಿರುವ ಬಾಳೆಗಿಡದ ಹೂ ಅಥವಾ ಬಾಳೆಕುಂಡಿಗೆ ನಮ್ಮ ಬಂಧುಗಳ ಮನೆಯ ಪಚ್ಚಬಾಳೆ ಗಿಡದಲ್ಲಿ ಬೆಳೆದಿದ್ದು ಅಸಾಮಾನ್ಯ ಗಾತ್ರದಲ್ಲಿದೆ. ಬರೀ ಹೂವು ಮಾತ್ರವೇ ಎರಡು ಅಡಿಗಿಂತಲೂ ದೊಡ್ಡದಿದ್ದು ಬಲಿಷ್ಠವಾಗಿದೆ. ಗಿಡ ಮಾತ್ರ ಸಾಮಾನ್ಯ ಬೆಳವಣಿಗೆಯಲ್ಲಿದೆ. ನಾವೆಲ್ಲ ನಮ್ಮ ಅನುಭವದಲ್ಲಿ ಕಂಡಿರುವ ಬಾಳೆಹೂವಿಗೂ ಇದಕ್ಕೂ ಅಜಗಜಾಂತರ ವ್ಯತ್ಯಾಸವಿದ್ದು ನೋಡುವವರಿಗೆ ಅತಿ ಕುತೂಹಲ ಉಂಟು ಮಾಡಿ ಈ ಗೊನೆಯ ಹಣ್ಣುಗಳು ಇನ್ನೆಷ್ಟು ದೊಡ್ಡ ಗಾತ್ರದಲ್ಲಿರಬಹುದು ಎಂದು ಊಹಿಸುವಂತಿದೆ.

—ಸಿ.ಆರ್. ಚಂಪಾ, ಚನ್ನಸಂದ್ರ



## ಕಣ್ಮರೆಯಾದ ಮೆರ್ಕೋಲು

ಸುಧಾರಿತ ಯಂತ್ರಗಳು ಬಂದು ಇಂದು ಕೃಷಿ ಕೆಲಸ ಸುಲಭವಾಗಿದೆ. ಮಾನವ ಮತ್ತು ಎತ್ತುಗಳ ಶ್ರಮವನ್ನು ಹೆಚ್ಚಾಗಿ ಅವಲಂಬಿಸಿದ್ದ ಭತ್ತದ ಕೃಷಿಕಾರ್ಯ ಮತ್ತು ಸುಗ್ಗಿ ಕಾಲದ ಹಲವು ಚಟುವಟಿಕೆಗಳಲ್ಲೂ ಸುಧಾರಿತ ಯಂತ್ರಗಳು ಬಂದು ಹಿಂದೆ ಬಳಕೆಯಲ್ಲಿದ್ದ ಅನೇಕ ವಸ್ತುಗಳು ಇಂದು ತೆರೆಮರೆಗೆ ಸರಿಯುಂತೆ ಮಾಡಿದೆ. ಭತ್ತದ ಪೈರು ಕತ್ತರಿಸಿ ಗೊಣಬೆ ಹಾಕಿಟ್ಟು, ನಂತರದಲ್ಲಿ ಅವನ್ನು ಬಡಿದು ಭತ್ತವನ್ನು ಹುಲ್ಲಿನಿಂದ ಬೇರ್ಪಡಿಸುವುದು ಮೊದಲಿನ ಹಂತ. ಆ ನಂತರದಲ್ಲಿ ಅದೇ ಹುಲ್ಲನ್ನು ಸುಗ್ಗಿ ಕಣದಲ್ಲಿ ಗೋಲಾಕಾರದಲ್ಲಿ ಹರಡಿ, ಅವುಗಳ ಮೇಲೆ ಜಾನುವಾರುಗಳನ್ನೋ ಅಥವಾ ಎತ್ತುಗಳನ್ನು ಓಡಾಡಿಸಿ ಬಿಳಿಹುಲ್ಲನ್ನು ಇನ್ನಷ್ಟು ನುಗ್ಗಾಗಿಸಿ ಮೇವಾಗಿ ಪರಿವರ್ತಿಸುವುದು ಹಿಂದಿನ ಕಾಲದಲ್ಲಿ ಭತ್ತ ಬೆಳೆದವರು ಮಾಡುತ್ತಿದ್ದ ಎರಡನೇ ಹಂತದ ಕೆಲಸವಾಗಿತ್ತು. ಈ ಹಂತದಲ್ಲಿ ನೆಲಕ್ಕೆ ಹಾಸಿದ ಬಿಳಿಹುಲ್ಲನ್ನು ಮೇಲೆತ್ತಿ ಬಿಡಿಬಿಡಿಯಾಗಿಸಲು ಮತ್ತು ಬಿಳಿಹುಲ್ಲು ಮೇಲೆತ್ತಿ ಹೊರೆ ಕಟ್ಟಲು 'ಮೆರ್ಕೋಲು' ಎನ್ನುವ ಸಾಧನ ಬಲು ಉಪಯುಕ್ತವಾಗಿತ್ತು. ಒಂದು ಅಂಗೈ ಅಗಲದ ಕಬ್ಬಿಣದ ಕೊಕ್ಕೆ ರೂಪದ ಚಿಕ್ಕ ಸಾಧನವನ್ನು ಮಾರುದ್ದದ ಕೋಲಿಗೆ ಗಟ್ಟಿಯಾಗಿ ಜೋಡಿಸಲಾಗುತ್ತದೆ. ಅದೇ ಮೆರ್ಕೋಲು. ಇಂದು ಬಿಳಿಹುಲ್ಲನ್ನು ಯಂತ್ರದ ಸಹಾಯದಿಂದ, ಕಡಿಮೆ ಸಮಯದಲ್ಲಿ ಒಂದೇ ಅಳತೆಯ ಪಿಂಡಿಯಾಗಿ ಕಟ್ಟಲಾಗುತ್ತಿದೆ. ಅಂದು ಬಳಕೆಯಲ್ಲಿದ್ದ ಮೆರ್ಕೋಲು ಈಗ ಎಲ್ಲೂ ಕಾಣದಾಗಿದೆ.

—ಅರ್ಚನಾ ಜಿ. ಬೊಮ್ನಳ್ಳಿ

## ಚೆರ್ರಿ ಗಿಡಕ್ಕೆ ಊರುಗೋಲು!

ಸಿಂಗಪುರ ಚೆರ್ರಿ ಅಥವಾ ಗಸಗಸೆ ಗಿಡ ಬಹುತೇಕ ಜನರಿಗೆ ಪರಿಚಿತವಾಗಿದೆ. ಶೀಘ್ರವಾಗಿ ಬೆಳೆಯುವ ಹಾಗೂ ಕೊಡೆಯಂತೆ ಹರಡಿಕೊಂಡು ಉತ್ತಮ ನೆರಳು ನೀಡುವುದರ ಜೊತೆಗೆ ಸಿಹಿಸಿಹಿಯಾದ ಗೋಲಿಯಾಕಾರದ ಹಣ್ಣುಗಳನ್ನು ನೀಡುವುದರಿಂದ ಇದು ಹೆಚ್ಚು ಜನಪ್ರಿಯತೆ ಗಳಿಸಿದೆ.

ಬಯಲು ಸೀಮೆಯಲ್ಲಿ ಯಥೇಚ್ಛವಾಗಿ ಸುರಿಯುವ ಬಿಸಿಲ ಮಳೆಗೆ ತಾತ್ಕಾಲಿಕವಾಗಿ ತಡೆಯೊಡ್ಡುವ ಈ ಗಿಡವು ಅಲ್ಲಲ್ಲಿ ಕೊಡೆ ನೆಟ್ಟಂತೆ ಕಂಡರೂ ಬಿಸಿಲಿಗೆ ಬಳಲಿ ಬೆಂದವರಿಗೆ ಆಪ್ಯಾಯಮಾನವಾದ ನೆರಳನ್ನು ಉಣಬಡಿಸುತ್ತವೆ.

ಇಲ್ಲೊಬ್ಬ ರೈತ ಹೀಗೆ ಬಾಗಿದ ಕೊಂಬೆಗಳನ್ನು ಕತ್ತರಿಸುವ ಬದಲಾಗಿ ಅವುಗಳು ನೆಟ್ಟಗೆ ನಿಲ್ಲುವಂತೆ ಮಾಡಲು ಊರುಗೋಲುಗಳನ್ನು ನೆಟ್ಟಿದ್ದಾನೆ! 'ಕಡಿಯೋದು ಸುಲಭ ಕಟ್ಟೋದು ಕಷ್ಟ. ಕೊಂಬೆ ಕಡಿಯುವುದರಿಂದ ಸಮಯಶ್ರಮನೆರಳು ಮೂರೂ ವ್ಯರ್ಥ ಅದರ ಬದಲಿಗೆ ಗೂಟ ನೆಟ್ಟು ಆಸರೆ ಕೊಟ್ರೆ ನಮಗೆ ಉತ್ತಮ ನೆರಳು ಮತ್ತು ಗಿಡಕ್ಕಾಗುವ ಹಿಂಸೆಯೂ ತಪ್ಪುತ್ತದೆ' ಎನ್ನುವ ರೈತ ಸುಖಾಸುಮ್ಮನೆ ಕೊಂಬೆಗಳನ್ನು ಕತ್ತರಿಸುವುದು ಹಾಗೂ ಚಿಗುರೆಲೆಗಳನ್ನು ಚಿವುಟುವುದನ್ನು ಟೀಕಿಸುತ್ತಾರೆ.

—ಮಹೇಶ್ವರ ಹುರುಕಡ್ಲಿ ಬಾಚಿಗೊಂಡನಹಳ್ಳಿ



